## **ಹಿರಿಯ ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮಾನವಿ**

| | |
|---|---|
| CC No. | 98/2023 |

**CW 2 : PW 1**

**ದಿನಾಂಕ 17-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

| | |
|---|---|
| ಹೆಸರು | ಚನ್ನಬಸವ |
| ತಂದೆಯ ಹೆಸರು | ಭೀಮಣ್ಣ |
| ವಯಸ್ಸು | 27 ವರ್ಷ |
| ಉದ್ಯೋಗ | ಚಾಲಕ |
| ವಾಸಸ್ಥಳ | ಕಲ್ಲೂರು |

**ಮುಖ್ಯ ವಿಚಾರಣೆಃ** ಸ.ಸ.ಅ. ಅವರಿಂದಃ.

ಚಾಸಾ-3 ನನಗೆ ಪರಿಚಯಸ್ಥರು.

ಈಗ ನೋಡುತ್ತಿರುವ ಸಹಿ ನನ್ನದಾಗಿರುತ್ತದೆ. ಸಾಕ್ಷಿ ಸ್ಥಳ ಪಂಚನಾಮೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಮಹಜರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ:10-03-2021 ರಂದು ಸ-4-30 ರಿಂದ 5-30 ಗಂಟೆ ಸಮಯದಲ್ಲಿ ಜರುಗಿಸಿ ಸ್ಥಳದಲ್ಲಿ ಸಿಕ್ಕ 2 ಕಟ್ಟಿಗೆಗಳು ಮತ್ತು ಒಂದು ಕಬ್ಬಿಣದ ರಾಡನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಕಲ್ಲೂರಿನಲ್ಲಿ ಹೊಲದ ಸಂಬಂಧ ನಡೆದಿದ್ದ ಗಲಾಟೆಯ ವಿಚಾರಕ್ಕೆ ಕುರಿತಂತೆ ಮಾಡಿರುತ್ತಾರೆ.

ನನ್ನ ಜೊತೆ ಚಾಸಾ-3 ರವರು ಸಹ ಇದ್ದು, ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ಸದರಿ 2 ಕಟ್ಟಿಗೆಗಳು ಮತ್ತು ಒಂದು ಕಬ್ಬಿಣದ ರಾಡನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

ಸಾಕ್ಷಿಯು ಸದರಿ ವಸ್ತುಗಳನ್ನು ಗುರುತಿಸಿದ ಮೇರೆಗೆ ಕಬ್ಬಿಣದ ಕಟ್ಟಿಗೆಗಳನ್ನು ಮು.ಮಾ.1 ಮತ್ತು 2 ಎಂದು ಕಬ್ಬಿಣದ ರಾಡನ್ನು ಮು.ಮಾ.3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಅ.ಅ.ರವರು ಸಾಕ್ಷಿದಾರರನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಕೋರಿರುವ ಅನುಮತಿಯನ್ನು ಪುರಸ್ಕರಿಸಲಾಗಿದೆ.)**

**ಪಾಟಿ ಸವಾಲುಃ ಸ.ಸ.ಅ.ರವರಿಂದ**

ಸದರಿ ಮಹಜರಿನ ಸಮಯದಲ್ಲಿ ಪೋಲಿಸರು ಒಟ್ಟು 3 ರಾಡುಗಳನ್ನು ಅಮಾನತ್ತುಪಡಿಸಿಕೊಂಡಿದ್ದು ನ್ಯಾಯಾಲಯದ ಮುಂದೆ ಇರುವ ಇತರೆ 2 ರಾಡುಗಳು ಸಹ ಆ ದಿನ ಅಮಾನತ್ತುಪಡಿಸಿಕೊಂಡ ರಾಡುಗಳಾಗಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :ಆರೋಪಿತರ ಪರ ವಕೀಲರಿಂದ :**

ಚಾಸಾ-1 ನನ್ನ ದೂರದ ಸಂಬಂಧಿಯಾಗಿರುವುದರಿಂದ ನನಗೆ ಪರಿಚಯ. ಸಂಬಂಧದಲ್ಲಿ ಅವರು ನನಗೆ ಮಾವನಾಗಬೇಕು. ನನ್ನನ್ನು ಸದರಿ ಸ್ಥಳಕ್ಕೆ ಬರುವಂತೆ ಕಿರಣ ತಂದೆ ರಾಮಣ್ಣ ಕರೆದಿರುತ್ತಾನೆ. ಆತ ಫೊನ್ ಮಾಡಿ ನನ್ನನ್ನು ಬರುವಂತೆ ಕೇಳಿಕೊಂಡಿರುತ್ತಾನೆ. ಆತ ಕರೆದಿದ್ದರಿಂದ ನಾನು ಸದರಿ ಸ್ಥಳಕ್ಕೆ ಬಂದಿದ್ದೆ. ನಾನು 4-30 ರಿಂದ ಸ-5-30 ಗಂಟೆಯವರೆಗೆ ಇದ್ದೆ. ಸದರಿ ಮು.ಮಾ.1 ಮತ್ತು 2 ಭೋಜಪ್ಪ ಎನ್ನುವವರ ಮನೆಯ ಕಂಪೌಂಡಿನಿಂದ ಮನೆಯ ಹೊರಗಡೆ ಇತ್ತು. ಸದರಿ ಮು.ಮಾ.1 ಮತ್ತು 2 ಕಂಪೌಂಡಿನ ಹೊರಗೆ ಮತ್ತು ರೋಡಿನಿಂದ ಸುಮಾರು ದೂರದಲ್ಲಿತ್ತು. ನಿಪಿ-1 ಕ್ಕೆ ಸಹಿಯನ್ನು ಹೊರತುಪಡಿಸಿ ಬೇರೆ ಎಲ್ಲೂ ನಾನು ಸಹಿ ಮಾಡಿಲ್ಲ. ನಾನು ನಿಪಿ-1 ನ್ನು ಓದಿರುವುದಿಲ್ಲ ಆದರೆ ಪೋಲಿಸರು ಓದಿ ಕೇಳಿದ್ದು ಅದರಲ್ಲಿ ಏನು ಬರೆದಿರುತ್ತದೆ ಎಂದು ಈಗ ನನಗೆ ನೆನಪಿಲ್ಲ. ನಿಪಿ-1 ರಲ್ಲಿ ಆರೋಪಿತರು 2 ಕಟ್ಟಿಗೆ ಮತ್ತು ಒಂದು ರಾಡಿನಿಂದ ಹೊಡೆದಿರುತ್ತಾರೆ ಎಂದು ಬರೆದಿರುತ್ತಾರೆ ಎಂದು ಪೋಲಿಸರು ನನಗೆ ಹೇಳಿರುತ್ತಾರೆ. ಪಂಚನಾಮೆಯನ್ನು ಒಂದು ಪೇಜಿನಲ್ಲಿ ಬರೆದಿರುತ್ತಾರೆ. ಸ್ಥಳದಲ್ಲಿ ಇರುತ್ತದೆ ಎಂದು ಹೇಳುತ್ತಿರುವ ಇಸ್ತ್ರಿ ಅಂಗಡಿ ಯಾರಿಗೆ ಸೇರಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ-1 ನ್ನು ಪೋಲಿಸರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ನ್ನು ಬರೆಯುವಾಗ ಕ್ಷೀರಲಿಂಗ, ಈರಣ್ಣ ತಂದೆ ರಾಮಣ್ಣ, ಪ್ರಭು ತಂದೆ ರಾಮಣ್ಣ, ಕುಮಾರ, ಶರಣಬಸವ ತಂದೆ ರಾಮಣ್ಣ ಇದ್ದರು. ಪೋಲಿಸರು ಬರೆದ ನಂತರ ನನಗೆ ಸಹಿ ಮಾಡಲು ಹೇಳಿದ್ದು, ಆ ನಂತರ ನಾನು ಸಹಿ ಮಾಡಿರುತ್ತೇನೆ. ಮು.ಮಾ.1 ರಿಂದ 3 ಒಂದೇ ಜಾಗದಲ್ಲಿ ಬಿದ್ದಿತ್ತು. ಕ್ಷೀರಲಿಂಗ

@ ಕೀರಲಿಂಗ ಅಲ್ಲಿ ಜಗಳ ಆಗಿದೆ ಸಾಕ್ಷಿಗಾಗಿ ಬೇಕು ಎಂದು ಹೇಳಿದ್ದಕ್ಕೆ ನಾನು ಹೋಗುತ್ತಿದ್ದೇನೆ. ಪೋಲಿಸರು ಸುಮಾರು 1-00 ಗಂಟೆ ಅಲ್ಲಿದ್ದರು. ಪೋಲಿಸರು ಮು.ಮಾ.1 ರಿಂದ 3 ನ್ನು ಒಟ್ಟಿಗೆ ಒಂದು ಕರ್ ಚೀಫ್ ಹಾಕಿ ತೆಗೆದುಕೊಂಡಿರುತ್ತಾರೆ. ಕಟ್ಟಿಗೆಯ ಅಳತೆ ಎಷ್ಟು ಇತ್ತು ಎಂದು ಈಗ ನನಗೆ ನೆನಪಿಲ್ಲ. ಕಬ್ಬಿಣದ ರಾಡು ಸುಮಾರು 8 ಅಡಿ ಉದ್ದ ಇತ್ತು. ಪೋಲಿಸರು ಪಂಚನಾಮೆಯ ಸಮಯದಲ್ಲಿ ಫೋಟೋ ತೆಗೆದಿದ್ದು ವೀಡಿಯೋ ಮಾಡಿಲ್ಲ. ಕ್ಷೀರಲಿಂಗ ಸಹ ನನಗೆ ಮಾವನಾಗಬೇಕು. ಚಾಸಾ-1 ಮತ್ತು ಕ್ಷೀರಲಿಂಗರವರು ನನ್ನ ಸಂಬಂಧಿಕರಾಗಿರುವುದರಿಂದ ಅವರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

ನಾನು ಹೇಳುತ್ತಿರುವಂತಹ ಜಾಗದಲ್ಲಿ ಯಾವುದೇ ಗಲಾಟೆ ನಡೆಯದೇ ಇದ್ದರು ಸುಳ್ಳು ಪಂಚನಾಮೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 3 ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿರುತ್ತವೆ ಎಂದರೆ ಸರಿ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಪಂಚನಾಮೆಯನ್ನು ಸೃಷ್ಟಿಸಿದ್ದು ಅದಕ್ಕೆ ನಾನು ಸಾಕ್ಷಿದಾರನಾಗಿ ನನ್ನ ಸಂಬಂಧಿಕರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 3 ನ್ನು ಮಹಜರ್ ಅಡಿಯಲ್ಲಿ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು. ಮಾ.1 ಕ್ಕೂ ಆರೋಪಿತರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಮಾನವಿ.